ದಿನಾಂಕಃ 16-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಆರ್. ಎನ್. ಎಚ್ ವಕೀಲರಿಂದಃ**

**29**. ದಾವೆ ಬ ಆಸ್ತಿಯ 1 ನೇ ಐಟಂ ಮನೆ ಸರ್ವೆ ನಂ 52 /1+2 ರಲ್ಲಿ ಇದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರು ಪಡಿಸಿದ್ದೇನೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರವನ್ನು ಬರೆಯಲು ನನ್ನ ತಾಯಿ ಮಾಹಿತಿ ಕೊಟ್ಟಿದ್ದಾರೆ. ವಾದ ಪತ್ರವನ್ನು ಬರೆಯಲು ನನ್ನ ತಾಯಿ ಮಾಹಿತಿ ಕೊಟ್ಟಿರುವುದರಿಂದ ಅದರಲ್ಲಿ ಏನು ಬರೆದಿದೆ ಹಾಗೂ ಯಾವೆಲ್ಲಾ ದಾಖಲೆಗಳು ಹಾಜರು ಪಡಿಸಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ಎದುರಿಗೆ ಹೇಳಿರುವುದು ಎಂದು ನುಡಿಯುತ್ತಾರೆ. ವಾದ ಪತ್ರ ತಯಾರಿಸಲು ವಕೀಲರ ಕಚೇರಿಗೆ ನಾನು ಹಾಗೂ ನನ್ನ ತಾಯಿ ಇಬ್ಬರೂ ಹೋಗಿದ್ದೆವು. 1 ನೇ ಪ್ರತಿವಾದಿ ಒಂದು ಫಾರ್ಮ ಹೌಸ್ ನ್ನು ಕಟ್ಟಲು ಪರವಾನಿಗೆ ಪಡೆದು ಅವರ ಸ್ವಂತ ಖರ್ಚಿನಲ್ಲಿ ಕಟ್ಟಿರುವುದು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಹಶೀಲ್ದಾರ ರವರಿಗೆ 1/3 ಹಕ್ಕಿನಲ್ಲಿ ಫಾರ್ಮ ಹೌಸ್ ಕಟ್ಟಲು ಅರ್ಜಿ ಕೊಟ್ಟು ಅದಕ್ಕೆ ಪರವಾನಿಗೆ ನೀಡಿದ್ದಾರೆ ಎಂದು ಜೆರಾಕ್ಸ ಪ್ರತಿಯನ್ನು ತೋರಿಸಿದಾಗ, ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ದಾವಾ ಬ ಸ್ವತ್ತಿನ 1 ನೇ ಐಟಂ ನ್ನು ನನ್ನ ಪ್ರಕಾರ ನನ್ನ ತಾಯಿ ಕಟ್ಟಿರುವುದು. ಅದನ್ನು 3 ವರ್ಷದ ಹಿಂದೆ ನನ್ನ ತಾಯಿ ಕಟ್ಟಿರುತ್ತಾರೆ. ನನ್ನ ತಾಯಿಯವರು ನಾನು ಹೇಳಿರುವ RCC ಕಟ್ಟಡ ಕಟ್ಟಲು ಯಾವ ಯಾವ ಇಲಾಖೆಗೆ ಅರ್ಜಿ ಸಲ್ಲಿಸಿ ಪರವಾನಿಗೆ ಪಡೆದಿದ್ದಾರಾ ಎಂದು ನನಗೆ ಮಾಹಿತಿ ಇಲ್ಲ.

**30**. ನನ್ನ ತಾಯಿ ಕೊಡ್ಲಗದ್ದೆ ಗ್ರಾಮದಲ್ಲಿ ಕೊನೆಯದಾಗಿ ವಾಸ ಇದ್ದದ್ದು 3 ವರ್ಷದ ಹಿಂದೆ. ದಾವಾ ಬ 1 ನೇ ಐಟಂ ನ ಮೌಲ್ಯ ರೂ. 50,00,000/- ಎಂದು ನನ್ನ ತಾಯಿ ಹೇಳಿರುವ ಮಾಹಿತಿಯಂತೆ ಹೇಳಲಾಗಿದೆ. ಆ ಮನೆಗೆ ಕಟ್ಟಡ ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ ರಶೀದಿಗಳು ನನ್ನ ತಾಯಿ ಹಾಜರು ಪಡಿಸಿದ್ದಾರಾ ಎಂದು ನನಗೆ ಗೊತ್ತಿಲ್ಲ. ಕೃಷಿ ಸಲಕರಣೆ ಇಡುವ ನಾನು ಹೇಳಿದ ಹಂಚಿನ ಮನೆ ದಾವಾ ಸರ್ವೆ

ನಂ. 52/1+2 ರಲ್ಲಿ ಬರುತ್ತದೆ. ಆ ಹಂಚಿನ ಮನೆಯ ಮನೆ ನಂಬರ್ ಗೊತ್ತಿಲ್ಲ. ಆ ಹಂಚಿನ ಮನೆಯನ್ನು ತಾಯಿಯವರು ಕಟ್ಟಿಸಿರುವುದು. ಆ ಹಂಚಿನ ಮನೆಯಲ್ಲಿ ನನ್ನ ವಿವಾಹಕ್ಕೆ ಪೂರ್ವದಲ್ಲಿ ನಾನು ವಾಸ ಇದ್ದೆ. ಆ ಮನೆಯನ್ನು ಸುಮಾರು 22 ವರ್ಷ ಗಳ ಹಿಂದೆ ಕಟ್ಟಿರುವುದು. ನನಗೆ ಈಗ 42 ವರ್ಷ ವಯಸ್ಸು. ಆ 22 ವರ್ಷಗಳಿಗಿಂತ ಹಿಂದೆ ನನ್ನ ಚಿಕ್ಕಪ್ಪ ಹಾಗೂ ನನ್ನ ಅಜ್ಜ ಇದ್ದ ಇನ್ನೊಂದು ಮನೆಯಲ್ಲಿ ಒಟ್ಟಾಗಿ ವಾಸ ಇದ್ದೆವು. ನಾವು 2001 ರ ತನಕ ಆ ರೀತಿ ಒಟ್ಟಾಗಿ ವಾಸ ಇದ್ದೆವು. ಆ ಮನೆಯಲ್ಲಿದ್ದಾಗ ಒಟ್ಟು ಕುಟುಂಬ ನಾತೆಯಿಂದ ಇದ್ದೀರಾ ಎಂದರೆ ಸಾಕ್ಷಿ ಒಂದೇ ಮನೆಯಲ್ಲಿ ಎರಡು ಭಾಗದಲ್ಲಿ ಬೇರೆ ಬೇರೆ ಇದ್ದೆವು ಎಂದು ನುಡಿಯುತ್ತಾರೆ.

**31**. ನನ್ನ ತಂದೆ 1983 ರಲ್ಲಿ ಮೃತ ಪಟ್ಟಿದ್ದಾರೆ ಎಂದರೆ ಸರಿ. 2001 ರಲ್ಲಿ ನಾವು ಆ ಮನೆಯಲ್ಲಿದ್ದಾಗ ನಮ್ಮ . ತಂದೆಯ ಒಟ್ಟು ಕುಟುಂಬದ ಆಸ್ತಿ ವಿಭಾಗವಾಗಿತ್ತು. 2001 ರ ನಂತರ ನಾವು ವಿಭಾಗವಾಗಿ ಬೇರೆ ಬೇರೆ ಇದ್ದೆವು ಎಂದು ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪತ್ರದಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಚಿದಂಬರ ರಾಮಾ ಹೆಗಡೆ ನನ್ನ ಅಜ್ಜ ಎಂದರೆ ಸರಿ. ಅವರಿಗೆ ಧನಂಜಯ, ಸುಬ್ರಾಯ, ನಾರಾಯಣ, ರಾಮಚಂದ್ರ, ಸುಶೀಲಾ ಮತ್ತು ಚಂದ್ರಕಲಾ ಎಂಬ ಮಕ್ಕಳು ಎಂದರೆ ಸರಿ. ಕೊಡ್ಲಗದ್ದೆ ಯ ಸರ್ವೆ ನಂಬರ 95 ಹಿಸ್ಸಾ 2 ರಲ್ಲಿ 15 ಗುಂಟೆ, ಸರ್ವೆ ನಂ. 94 /ಹಿಸ್ಸಾ 2 ರಲ್ಲಿ 39 ಗುಂಟೆ, ಸರ್ವೆ ನಂ. 51 ರಲ್ಲಿ 3 ಎಕರೆ 34 ಗುಂಟೆ ಸರ್ವೆ, ನಂ. 50 ರಲ್ಲಿ 3 ಎಕರೆ 31 ಗುಂಟೆ ಹಾಗೂ ಸರ್ವೆ ನಂ. 104 ರಲ್ಲಿ 3 ಎಕರೆ 11 ಗುಂಟೆ ನನ್ನ ಅಜ್ಜನಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ಆ ಆಸ್ತಿಗಳು ನನ್ನ ಪ್ರಕಾರ ಮೌಖಿಕವಾಗಿ ವಿಭಾಗವಾಗಿದೆ. ಆ ಆಸ್ತಿಗಳು ನ್ಯಾಯಾಲಯದ ಮುಖಾಂತರ ಅಥವಾ ನೋಂದಣಿ ದಾಖಲೆ ಮೂಲಕ ವಿಭಾಗವಾಗಿದ್ದಲ್ಲ ಎಂದರೆ ಸರಿ. ಆ ಆಸ್ತಿಗಳಲ್ಲಿ ಆ ರೀತಿ ಭಾಗ ಆಗುವಾಗ ನಮಗೆ ಭಾಗದಲ್ಲಿ ಸ್ವಲ್ಪ ಕಡಿಮೆ ಬಂದಿದೆ ಎಂದರೆ ಸರಿ. ಆ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಎಲ್ಲಾ ಆಸ್ತಿಗಳು ಈ ದಾವೆಯ ಅವಶ್ಯಕ ಆಸ್ತಿಗಳು ಎಂದರೆ ಸರಿಯಲ್ಲ

**ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.